## 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

**ಎಸ್‌ಸಿ. 245/2023**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ | ಶ್ರೀಮತಿ ವಿನುತಾ | ಪ್ರಮಾಣ ಮಾಡಿಸಿದ ದಿನಾಂಕಃ |
| **ತಂದೆ/ಗಂಡನ ಹೆಸರು** | ಃ | ಬಾಲಾಜಿ | **21.12.2024** |
| **ವಯಸ್ಸು** | ಃ | **34 ವರ್ಷ** | |
| **ವೃತ್ತಿ** | ಃ | ಅಸಿಸ್ ಟೆಂಟ್ ಇಂಜಿನಿಯರ್ , ಪಿಡಬ್ಲೂಡಿ | **ಪ್ರಾ.ಸಾ. ಃ 1** |
| **ವಾಸಸ್ಥಳ** | ಃ | ಬೆಂಗಳೂರು | **ಚಾ.ಸಾ. ಃ 14** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು *2022* ರಿಂದ *2024* ರ ಆಗಸ್ಟ್ ವರೆಗೆ ನಾನು ಮೈಸೂರಿನ ನಂ.*1* ವಿಶೇಷ ಉಪವಿಭಾಗ ಲೋಕೋಪಯೋಗಿ ಇಲಾಖೆ ಕಛೇರಿಯಲ್ಲಿ ಸಹಾಯಕ ಇಂಜಿನಿಯರ್ ಆಗಿ ಕೆಲಸ ಮಾಡಿದ್ದೇನೆ. ಮೇಟಗಳ್ಳಿ ಪೊಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ *33/2023* ಪ್ರಕರಣದಲ್ಲಿನ ಘಟನಾ ಸ್ಥಳದ ನಕಾಶೆ ತಯಾರಿಸಲು ನಮ್ಮ ಕಛೇರಿಗೆ ಪತ್ರ ಬಂದಿದ್ದರಿಂದ ನನ್ನನ್ನು ಆ ನಕಾಶೆ ತಯಾರಿಸಲು ನೇಮಿಸಿದ್ದರು. ಆ ಕಾಲಕ್ಕೆ ದಿಃ *23.03.2023* ರಂದು ನಾನು ಆ ಘಟನಾ ಸ್ಥಳಕ್ಕೆ ಹೋಗಿ ಮೇಟಗಳ್ಳಿ ಪೊಲೀಸ್ ಠಾಣೆಯ ಹೆಚ್ ಸಿ *468* ನಂದಕುಮಾರ್ ಇವರು ತೋರಿಸಿದ ಘಟನಾ ಸ್ಥಳದ ನಕಾಶೆ ತಯಾರಿಸಿದೆನು. ಆ ಕಾಲಕ್ಕೆ ಅವರು ಎರಡು ಸ್ಥಳಗಳನ್ನು ತೋರಿಸಿದ್ದು ಆ ಎರಡು ಸ್ಥಳದ ನಕಾಶೆ ತಯಾರಿಸಿದ್ದೇನೆ. ಈಗ ನಾನು ನೋಡುತ್ತಿರುವ ದಾಖಲೆಗಳು ನಾನು ತಯಾರಿಸಿದ ನಕಾಶೆಯಾಗಿದ್ದು ಅದರಲ್ಲಿ ನನ್ನ ಸಹಿ

***SC No. 245/2023***
***PW-01***

ಇವೆ. ಸದರಿ ನಕಾಶೆಗಳನ್ನು ನಿ ಪಿ *1* ಮತ್ತು *2* ಎಂದು ಸಹಿಗಳನ್ನು ನಿಪಿ *1*(ಎ) ಮತ್ತು *2*(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ ಆರೋಪಿ ಪರ ವಕೀಲ**ರ ಗೈರು ಹಾಜರಿದ್ದು ಆರೋಪಿ ಸಮಯ ಕೋರಿದ್ದು ಸೂಕ್ತ ಕಾರಣ ಇಲ್ಲದಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಗಿದೆ.

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

***ಓ ಹೇ ಕೇ ಸ ಇ ಎ ಒ.,***

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
***ಮೈಸೂರು***